ಒಳಾಂಗಣ ಕ್ರೀಡಾಂಗಣಗಳ ಕಳಪೆ ಕಾಮಗಾರಿ

158 (1836) ಶ್ರೀ ಎನ್.ಸಂಪಂಗಿ (ಬಾಗೇಪಲ್ಲಿ): ಮಾನ್ಯ ಯುವಜನ ಸೇವೆಗಳು ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ;

ಅ) ರಾಜ್ಯದಲ್ಲಿ ನಡೆದಂತಹ 4ನೇ ರಾಷ್ಟ್ರೀಯ ಕ್ರೀಡಾಕೂಟಗಳ ಸಂದರ್ಭದಲ್ಲಿ ನಿರ್ಮಿಸಲಾದಂತಹ ಒಳಾಂಗಣ ಕ್ರೀಡಾಂಗಣಗಳ ಸಂಖ್ಯೆ ಎಷ್ಟು (ಇಂಡೋರ್ ಸ್ಟೇಡಿಯಂ) ಯಾವ ಯಾವ ಸ್ಥಳಗಳಲ್ಲಿ ಈ ಒಳಾಂಗಣ ಕ್ರೀಡಾಂಗಣಗಳನ್ನು ನಿರ್ಮಿಸಲಾಗಿದೆ;

ಆ) ಈ ಒಳಾಗಂಣ ಕ್ರೀಡಾಂಗಣಗಳನ್ನು ನಿರ್ಮಿಸಲು ಗುತ್ತಿಗೆಯನ್ನು ಯಾವ ಸಂಸ್ಥೆಗೆ ವಹಿಸಲಾಗಿತ್ತು ಗುತ್ತಿಗೆದಾರರ ಪೂರ್ಣ ವಿವರಗಳನ್ನು ಒದಗಿಸುವುದು;

ಇ) ಈ ಒಳಾಂಗಣ ಕ್ರೀಡಾಂಗಣಗಳ ನಿರ್ಮಾಣಕ್ಕೆ ವೆಚ್ಚವಾಗಿರುವ ಹಣದ ಮೊತ್ತವೆಷ್ಟು; (ಪ್ರತಿಯೊಂದು ಒಳಾಗಣ ಕ್ರೀಡಾಂಗಣದ ಬಗ್ಗೆ ಪ್ರತ್ಯೇಕವಾದ ವಿವರಗಳನ್ನು ಒದಗಿಸುವುದು)

ಈ) ಅಪಾರ ವೆಚ್ಚದಲ್ಲಿ ನಿರ್ಮಿಸಲ್ಪಟ್ಟಿರುವ ಈ ಒಳಾಂಗಣ ಕ್ರೀಡಾಂಗಣಗಳು ಕಳಪೆ ಕಾಮಗಾರಿಗಳಿಂದಾಗಿ ನಿರ್ಮಿಸಿದ ಕೆಲವೇ ತಿಂಗಳುಗಳಲ್ಲಿ ಮಳೆ ಬಂದಾಗ ಸೋರುತ್ತಿರುವುದು ನಿಜವೇ;

ಉ) ಹಾಗಿದ್ದಲ್ಲಿ, ಈ ಕಳಪೆ ಕಾಮಗಾರಿಗೆ ಕಾರಣರಾದಂತಹ ಗುತ್ತಿಗೆದಾರರ ವಿರುದ್ಧ ಸರ್ಕಾರದ ಯಾವ ಕ್ರಮಗಳನ್ನು ಕೈಗೊಳ್ಳುತ್ತದೆ;

ಊ) ಅಂತಹ ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ ಸೇರಿಸಲಾಗುವುದೇ;

ಋ) ಇಲ್ಲದಿದ್ದಲ್ಲ ಕಾರಣಗಳೇನು ?

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್ (ಯುವಜನ ಸೇವೆ ಹಾಗೂ ಕ್ರೀಡಾ ರಾಜ್ಯ ಸಚಿವರು.)

ಅ) 1) ಬೆಂಗಳೂರಿನ ಕಂಠೀರವ ಕ್ರೀಡಾ ಸಂಕೀರ್ಣದಲ್ಲಿ -1

2) ಬೆಂಗಳೂರಿನ ಕೋರಮಂಗಲ ಬಡಾವಣೆಯಲ್ಲಿ -1

3) ಮೈಸೂರಿನ ಚಾಮುಂಡಿ ವಿಹಾರ್ ಕ್ರೀಡಾ ಸಂಕೀರ್ಣದಲ್ಲಿ -1

ಆ) 1) ಕಂಠೀರವ ಒಳಾಂಗಣ ಕೀಡಾಂಗಣ:

ಮೆ.ಲಾರ್ಸನ್ ಅಂಡ್ ಟೂಬ್ರೋ ಲಿಮಿಟೆಡ್ ಲಕ್ಷ್ಮೀನಾರಾಯಣ ಕಾಂಪ್ಲೆಕ್ಸ್, 5ನೇ ಮಹಡಿ 10:1, ಪ್ಯಾಲೆಸ್ ರಸ್ತೆ ಪಿ.ಬಿ.ನಂ.221 ಬೆಂಗಳೂರು - 560 052.

2) ಕೋರಮಂಗಲ ಒಳಾಂಗಣ ಕ್ರೀಡಾಂಗಣ.

ಮೆ. ಭಂಡಾರಿ ಬಿಲ್ಡರ್ಸ್, ಪ್ರೈ.ಲಿ. 308, ರಹೇಜ್ ಛೇಂಬರ್ಸ್, 12, ಮ್ಯೂಸಿಯಂ ರಸ್ತೆ, ಬೆಂಗಳೂರು - 560 001.

3) ಚಾಮುಂಡಿ ವಿಹಾರ ಒಳಾಂಗಣ ಕ್ರೀಡಾಂಗಣ ಮೈಸೂರು.

ಮೆ. ಹಿಂದೂಸ್ತಾನ್ ಸ್ಟೀಲ್ ವರ್ಕ್ಸ್ ಕನ್‌ಸ್ಟ್ರಕ್ಷನ್ ಲಿಮಿಟೆಡ್.

(ಭಾರತ ಸರ್ಕಾರದ ಸ್ವಾಮ್ಯದ ಸಂಸ್ಥೆ) 15 ನೇ ಮಹಡಿ, 12, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು - 560 001

ಇ) ರೂ.37,25,56,434-00 ಖರ್ಚಾದ ಹಣ

1) ಕಂಠೀರವ ಒಳಾಂಗಣ ಕ್ರೀಡಾಂಗಣ. - 19,27,47,729-00

2) ಕೋರಮಂಗಲ ಒಳಾಂಗಣ ಕ್ರೀಡಾಂಗಣ. - 9,67,24,887-00

3) ಮೈಸೂರು ಒಳಾಂಗಣ ಕ್ರೀಡಾಂಗಣ - 8,30,73,818-00

ಈ) ಇಲ್ಲ

ಉ) ಉದ್ಭವಿಸುವುದಿಲ್ಲ.

ಊ) ಉದ್ಭವಿಸುವುದಿಲ್ಲ.

ಋ) ಉದ್ಭವಿಸುವುದಿಲ್ಲ.

ಶ್ರೀ ಎನ್.ಸಂಪಂಗಿ: ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ, 1997ರಲ್ಲಿ ಕರ್ನಾಟಕಲ್ಲಿ 4ನೆಯ ರಾಷ್ಟ್ರೀಯ ಕ್ರೀಡೆಗಳು ನಡೆದವು. ರಾಷ್ಟ್ರೀಯ ಕ್ರೀಡೆಗಳ ಸಂದರ್ಭದಲ್ಲಿ ಸುಮಾರು 100 ಕೋಟಿ ರೂಪಾಯಿಗಳ ಭ್ರಷ್ಟಾಚಾರ ನಡೆದಿದೆ; ಇದರ ಬಗ್ಗೆ ನಾವು ಗಮನವನ್ನು ಹರಿಸಬೇಕಾಗಿದೆ. 100 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕಳಪೆ ಕಾಮಗಾರಿಗಳ ಕೆಲಸದಲ್ಲಿ ಕ್ರೀಡಾಂಗಣವನ್ನು ನಿರ್ಮಾಣ ಮಾಡಿದ್ದಾರೆ. ಇವತ್ತು 100 ಕೋಟಿ ರೂಪಾಯಿಗಳನ್ನು ಯಾವ ರೀತಿ ಉಪಯೋಗಿಸಿದ್ದಾರೆ, ಮತ್ತು ಎಲ್ಲೆಲ್ಲಿ ಈ ಹಣವು ಸೋರುವಿಕೆಯಾಗಿದೆ, ಇದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡಬೇಕಾಗಿದೆ.

ಶ್ರೀ ಆರ್.ರೋಷನ್‌ಬೇಗ್ (ಪ್ರವಾಸೋದ್ಯಮ ಸಚಿವರು) ಯವಜನ ಸೇವೆಗಳು ಹಾಗೂ ಕ್ರೀಡಾ ಸಚಿವರ ಪರವಾಗಿ): ಮಾನ್ಯ ಸದಸ್ಯರಾದ ಶ್ರೀ ಎನ್.ಸಂಪಂಗಿ ಯವರು 100 ಕೋಟಿ ರೂಪಾಯಿಗಳು ಯಾವ ರೀತಿ ಖರ್ಚಾಗಿದೆ ಎಂದು ಪ್ರಶ್ನೆಯನ್ನು ಕೇಳಿದ್ದಾರೆ. ಇದರ ಬಗ್ಗೆ ವಿವರಾದ ಉತ್ತರವನ್ನು ಅವರಿಗೆ ಕಳುಹಿಸಿಕೊಡುತ್ತೇನೆ.

ಶ್ರೀ ಎನ್.ಸಂಪಂಗಿ: ಅಂದಿನ ನ್ಯಾಷನಲ್ ಗೇಮ್ಸ್‌ಗೆ ಸರ್ಕಾರದವರು ಅಡ್ವೈಸರಿ ಮೆಂಬರ್ ಎಂದು ಅಪಾಯಿಂಟ್‌ಮೆಂಟ್ ಮಾಡಿಕೊಂಡರು. ಅವರ ಪ್ರಕಾರವಾಗಿ ಮತ್ತು ಕರ್ನಾಟಕ ಒಲಂಪಿಕ್ಸ್ ಅಸೋಸಿಯೇಷನ್‌ರವರ ಪ್ರಕಾರವಾಗಿ ಔಟ್‌ಡೋರ್ ಕಂಠೀರವ ಕ್ರೀಡಾಂಗಣವನ್ನು ರಾಷ್ಟ್ರೀಯ ಕ್ರೀಡೆಗಳಿಗೆ ತಕ್ಕಂತೆ ನಿರೂಪಿಸುವುದಕ್ಕೆ ಸುಮಾರು 5 ಕೋಟಿ ರೂಪಾಯಿಗಳ ಎಸ್ಟಿಮೇಟ್‌ನ್ನು ಮಾಡಿದ್ದರು. ಕಂಠೀರವ ಒಳಾಂಗಣ ಕ್ರೀಡಾಂಗಣಕ್ಕೆ ಎರಡು ಕೋಟಿ ರೂಪಾಯಿಗಳ ಎಸ್ಟಿಮೇಟ್‌ನ್ನು ಮಾಡಿದ್ದರು, ಮತ್ತೆ ಕೋರಮಂಗಲ ಒಳಾಂಗಣ ಕ್ರೀಡಾಂಗಣಕ್ಕೆ ಸುಮಾರು ಎರಡು ಕೋಟಿ ರೂಪಾಯಿಗಳ ಎಸ್ಟಿಮೇಟ್‌ನ್ನು ಮಾಡಿದ್ದರು.

ಆದರೆ ಸದರಿ ಕ್ರೀಡಾಂಗಣಗಳು ದಿಢೀರನೆ ಪೂರ್ಣಗೊಂಡಾಗ ಸುಮಾರು 55 ಕೋಟಿ ರೂಪಾಯಿಗಳ ವೆಚ್ಚವಾಗಿದೆ ಎಂದು ತೋರಿಸಿದ್ದಾರೆ. ಇವತ್ತು ಐದು ಕೋಟಿ ರೂಪಾಯಿಗಳ ಕಂಠೀರವ ಕ್ರೀಡಾಂಗಣವನ್ನು ಪ್ರಾರಂಭ ಮಾಡುವಂತಹ ಸಂದರ್ಭದಲ್ಲಿ ತೋರಿಸಿದಾಗ .....

ಅಧ್ಯಕ್ಷರು: ಮಾನ್ಯ ಸಂಪಂಗಿಯವರೆ, ತಾವು ಪ್ರಶ್ನೆಯನ್ನು, ಈ ರೀತಿಯಾಗಿದೆ ಅದಕ್ಕೇನು ಮಾಡುತ್ತೀರಿ ಎಂದು ಸಂಕ್ಷಿಪ್ತವಾಗಿ ಕೇಳಬೇಕು.

ಶ್ರೀ ಎನ್.ಸಂಪಂಗಿ: ಇವರು 55 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿದ್ದಾರೆ ಎಂದು ತೋರಿಸಿದ್ದಾರೆ, ಆದೇ ಸರ್ಕಾರದವರು ನ್ಯಾಷನಲ್ ಗೇಮ್ಸ್ ಅಡ್ವೈಸರಿ ಕಮಿಟಿಯವರು ಒಬ್ಬ ಮೆಂಬರನ್ನು ಅಪಾಯಿಂಟ್ ಮಾಡಿ, ಅವರು ಕೊಟ್ಟಂತಹ ಒಂದು ಎಸ್ಟಿಮೇಟ್‌ನ್ನು ಮತ್ತು ಪೂರ್ತಿಗೊಂಡಾಗ 55 ಕೋಟಿ ರೂಪಾಯಿಗಳು ವೆಚ್ಚವಾಗಿದೆ ಎನ್ನುವುದಕ್ಕೆ ಮಾನ್ಯಮಂತ್ರಿಗಳು ಆಧಾರವನ್ನು ನಮಗೆ ತೋರಿಸಿಕೊಡುತ್ತೀರಿ ? ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಆರ್.ರೋಷನ್‌ಬೇಗ್: ಮಾನ್ಯ ಸಂಪಂಗಿಯರರು ಸ್ಪೇಟ್ ಸ್ಪೋರ್ಟ್ಸ್‌ನ ಕೌನ್ಸಿಲ್‌ನ ವೈಸ್ ಚೇರ್ಮನ್ ಆಗಿದ್ದರು. ಅವರು 6 ವರ್ಷದ ಹಿಂದೆ ಇದ್ದಾಗ 32 ಲಕ್ಷ ರೂಪಾಯಿಗಳ ಒಂದು ಪ್ರಪೋಸಲ್ಸ್ ಇತ್ತು. ನಂತರ ಟೈಮ್ ಆಯಿತು, ನ್ಯಾಷನಲ್ ಗೇಮ್ಸ್ ಪೋಸ್ಪೋನ್ ಆಗುತ್ತಾ ಬಂತು. ಅದಕ್ಕಾಗಿ ಕನ್‌ಸ್ಟ್ರಕ್ಷನ್ ಕಾಸ್ಟ್ ಕೂಡ ಜಾಸ್ತಿಯಾಯಿತು. ಇದರ ಬಗ್ಗೆ ಎಷ್ಟು ಹಣ, ಹೇಗೆ ಖರ್ಚಾಗಿದೆ, ಏತಕ್ಕಾಗಿ ಖರ್ಚಾಗಿದೆ ಎಂಬುದರ ಬಗ್ಗೆ ವಿವರಣೆಯನ್ನು ಕೊಟ್ಟು ಕಳುಹಿಸಿದ್ದೇನೆ. ಮಾನ್ಯ ಸದಸ್ಯರು ಹಣ ಹೇಗೆ ಖರ್ಚಾಗಿದೆ ಎಂದು ಕೇಳುತ್ತಿದ್ದಾರೆ, ಮೊನ್ನೆ ತಾನೇ ಎ.ಜಿ.ಯವರು ಆಡಿಟ್ ಕೂಡ ಮಾಡಿದ್ದಾರೆ. ಇದರ ಬಗ್ಗೆ ಆಡಿಟ್ ರಿಪೋರ್ಟ್ ಕೂಡ ಬರುತ್ತಿದೆ, ಅವರು ಕೂಡ ಆಡಿಟ್ ವರದಿಯನ್ನು ನೋಡಬಹುದು.

ಶ್ರೀ ಸಿ.ಭೈರೇಗೌಡ: ಮಾನ್ಯ ಸದಸ್ಯರಾದ ಶ್ರೀ ಎನ್.ಸಂಪಂಗಿಯವರು 100 ಕೋಟಿ ರೂಪಾಯಿಗಳ ಅವ್ಯವಹಾರವಾಗಿದೆ ಎಂದು ಹೇಳುತ್ತಿದ್ದಾರೆ. ಸರ್ಕಾರ ಯಾವುದೇ ಇರಲಿ, ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಅವ್ಯವಹಾರವಾಗಿದ್ದರೆ ಅದರ ಬಗ್ಗೆ ಈಗ ಇರುವ ಸರ್ಕಾರವಾದರೂ, ಅವ್ಯವಹಾರವಾಗಿರುವುದು ನಿಜವೇ ಅಥವಾ ಸುಳ್ಳೇ ಎಂಬುದರ ಬಗ್ಗೆ ಹೇಳಬೇಕಾಗುತ್ತದೆ. ಒಂದು ವೇಳೆ ಮಾನ್ಯ ಸದಸ್ಯರು ಹೇಳಿದ ಹಾಗೆ ಅವ್ಯವಹಾರವಾಗಿದ್ದರೆ ಅದರ ಬಗ್ಗೆ ವಿಚಾರಣೆಯನ್ನು ಮಾಡುವ ಬಗ್ಗೆ ಸರ್ಕಾರ ಮುಂದಾಗುತ್ತದೆ. ಮಾನ್ಯ ಸದಸ್ಯರು ಸುಮಾರು 100 ಕೋಟಿ ರೂಪಾಯಿಗಳ ಅವ್ಯವಹಾರವಾಗಿದೆ ಎಂದು ಹೇಳುತ್ತಿದ್ದಾರೆ, ಅದು ನಿಜವೋ ಅಥವಾ ಸುಳ್ಳೋ ಇದರ ಬಗ್ಗೆ ಹೇಳಬೇಕು.

ಶ್ರೀ ಎನ್.ಸಂಪಂಗಿ: ಭ್ರಷ್ಟಾಚಾರ ಆಗಿರುವ ಒಂದು ಉದಾಹರಣೆಯನ್ನು ಕೊಡುತ್ತೇನೆ; ಒಳಾಂಗಣ ಕ್ರೀಡಾಂಗಣದ ಒಳಗಡೆ ಸಿಂಥೆಟಿಕ್ ಫ್ಲೋರ್ ಹಾಸತಕ್ಕಂತಹ ವಿಚಾರದಲ್ಲಿ ನೆದರ್‌ಲ್ಯಾಂಡ್ ಸಂಸ್ಥೆಯಿಂದ ಸುಮಾರು 4-5 ಕೋಟಿ ರೂಪಾಯಿಗಳ ಬೆಲೆ ಇರತಕ್ಕಂತಹ ಸಿಂಥೆಟಿಕ್ ಫ್ಲೋರ್‌ನ್ನು ಕರ್ನಾಟಕ್ಕೆ ತರಿಸಿಕೊಂಡರು. ಇವತ್ತು ಒಳಾಂಗಣ ಕ್ರೀಂಡಾಗಣದ ಒಳಗಡೆ ಕೂಡ ಸಿಂಥೆಟಿಕ್ ಫ್ಲೋರ್‌ನ್ನು ಹಾಕಿಲ್ಲ. ಇವತ್ತು ಸುಮಾರು 5 ಕೋಟಿ ರೂಪಾಯಿಗಳ ವೆಚ್ಚದಲ್ಲಿ ನೆದರ್‌ಲ್ಯಾಂಡ್ ಸರ್ಕಾರದಿಂದ ಇದನ್ನು ತರಿಸಿಕೊಂಡ ಮೇಲೆ, ಇವತ್ತು ಇವರು

ಅದನ್ನು ಅಳವಡಿಸದಿದ್ದರೆ ಅದು ಎಲ್ಲಿದೆ? ಈ 5 ಕೋಟಿ ರೂಪಾಯಿಗಳು ಏಕೆ ದುಂದು ವೆಚ್ಚವಾಗಿದೆ ಇದಕ್ಕೆ ಅಧಿಕಾರಿಗಳು ಯಾರು ಹೊಣೆಯಾಗಿದ್ದಾರೆ ಎಂಬುದನ್ನು ತಿಳಿಸಬೇಕು.

ಶ್ರೀ ಆರ್.ರೋಷನ್‌ಬೇಗ್: ನೆದರ್‌ಲ್ಯಾಂಡ್ ಸಿಂಥೆಟಿಕ್ ಫ್ಲೋರ್‌ನ ಅವ್ಯವಹಾರದ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ, ಇದಕ್ಕಾಗಿ ಸುಮಾರು 72 ಲಕ್ಷ ರೂಪಾಯಿಗಳು ಖರ್ಚಾಗಿದೆ. ಇದರ ಬಗ್ಗೆ ಸುಮಾರು 100 ಕೋಟಿ ರೂಪಾಯಿಗಳ ಅವ್ಯವಹಾರವಾಗಿದೆ, ಈ ಬಗ್ಗೆ ತನಿಖೆಯಾಗಬೇಕೆಂದು ಮಾನ್ಯ ಹಿರಿಯ ಸದಸ್ಯರಾದ ಶ್ರೀ ಸಿ.ಭೈರೇಗೌಡರು ಕೇಳಿದ್ದಾರೆ. ಇದರ ಬಗ್ಗೆ ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಪ್ರವಾಸ ಹೋಗಿದ್ದಾರೆ, ಇದರ ಬಗ್ಗೆ ಅವರ ಜೊತೆಯಲ್ಲಿ ಚರ್ಚೆ ಮಾಡಿ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು: ಈಗ ಪ್ರಶ್ನೋತ್ತರ ವೇಳೆ ಮುಗಿಯಿತು.

ಶ್ರೀ ಸಿ.ಭೈರೇಗೌಡ: ಇದರಲ್ಲಿ ಹಣ ದುರುಪಯೋಗ ಆಗಿದೆಯೋ ಇಲ್ಲವೋ ಅದಕ್ಕೆ ನೇರವಾಗಿ ಉತ್ತರವನ್ನು ಕೊಡಬೇಕು.

ಅಧ್ಯಕ್ಷರು: ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಬರುತ್ತಾರೆ, ಅವರ ಜೊತೆ ಚರ್ಚೆ ಮಾಡಿ ಉತ್ತರವನ್ನು ಕೊಡುತ್ತೇನೆಂದು ಮಂತ್ರಿಗಳು ಹೇಳಿದ್ದಾರೆ.

ಶ್ರೀ ಸಿ.ಭೈರೇಗೌಡ: ಇದರ ಬಗ್ಗೆ ಸರ್ಕಾರದಲ್ಲಿ ಅಂಕಿ ಅಂಶಗಳು ಇವೆ, ಅವರು ಅದನ್ನು ಹೇಳಲೇಕಲ್ಲವೆ? ಅವ್ಯವಹಾರ ಆಗಿದ್ದರೆ ಆಗಿದೆ ಎಂದು ಹೇಳಲಿ, ಇಲ್ಲದಿದ್ದರೆ ಇಲ್ಲ ಎಂದಾದರೂ ಹೇಳಬೇಕಲ್ಲವೆ?

ಅಧ್ಯಕ್ಷರು: ಮಾನ್ಯ ಪ್ರವಾಸೋದ್ಯಮ ಸಚಿವರಿಗೆ ವಿಷಯ ಗೊತ್ತಿಲ್ಲ, ಇದರ ಬಗ್ಗೆ ಯುವಜನ ಸೇವಾ ಕ್ರೀಡಾ ಸಚಿವರಿಗೆ ಗೊತ್ತಿದೆ.

ಶ್ರೀ ಸಿ.ಭೈರೇಗೌಡ: ಸಿ.ಆಂಡ್ ಎಜಿ.ಯವರಿಂದ ಆಡಿಟ್ ಆಗಿದೆ; ರಿಪೋರ್ಟ್‌ನ್ನು ನೋಡಿಕೊಳ್ಳಿ ಎಂದು ಮಾನ್ಯ ಪ್ರವಾಸೋದ್ಯಮ ಸಚಿವರು ಹೇಳುತ್ತಿದ್ದಾರೆ. ಸಿ ಆಂಡ್ ಎಜಿಯವರ ವರದಿಯಲ್ಲಿ ಏನು ಇದೆ ಎಂಬುದರ ಬಗ್ಗೆ ಸರ್ಕಾರದವರು ಹೇಳಬೇಕಾಗುತ್ತದೆ. ಮಾನ್ಯ ಸಚಿವರು ಆಡಿಟ್ ರಿಪೋರ್ಟ್ ಆಗಿದೆ ಎಂದು ಹೇಳಿ ಈಗ ರಿಪೋರ್ಟ್ ಬಂದಿಲ್ಲವೆಂದು ಹೇಳುತ್ತಾರೆ.

ಶ್ರೀ ಆರ್.ರೋಷನ್‌ಬೇಗ್: ರಿಪೋರ್ಟ್ ಬಂದಿಲ್ಲ. What I said on the floor of the House was ಎಜಿಯವರು ಆಡಿಟ್ ಮಾಡುತ್ತಿದ್ದಾರೆ, ಅವರು ಆಡಿಟ್ ಮಾಡಿದ ತಕ್ಷಣ ನಾನು ವರದಿಯನ್ನು ಕಳುಹಿಸಿಕೊಡುತ್ತೇನೆ ಎಂದು ಹೇಳುತ್ತಿದ್ದೇನೆ.

Sri C.Byregowda: I want a specific answer. ಅಲ್ಲಿ 100 ಕೋಟಿ ರೂಪಾಯಿಗಳ ಹಣ ದುರುಪಯೋಗ ಆಗಿದೆಯೇ, ಇಲ್ಲವೇ ಅದಕ್ಕೆ ನನಗೆ ಸ್ಪೆಸಿಫಿಕ್ ಆದ ಉತ್ತರ ಬೇಕು. I want a specific answer for that. It reflects on our Government. That is why I am raising it. ಸುಮಾರು 100 ಕೋಟಿ ರೂಪಾಯಿಗಳ ಅವ್ಯವಹಾರ ಆಗಿದೆಯೋ ಅಥವಾ ಇಲ್ಲವೋ ಅದನ್ನು ಹೇಳಬೇಕು.

ಅಧ್ಯಕ್ಷರು: ಅವ್ಯವಹಾರ ಆಗಿರುವ ಬಗ್ಗೆ ಆಡಿಟ್ ಆಗುತ್ತಿದೆ, ಆಡಿಟ್ ವರದಿಯನ್ನು ಕೊಟ್ಟಮೇಲೆ ತಾನೇ ಅವ್ಯವಹಾರವಾಗಿರುವ ಬಗ್ಗೆ ಗೊತ್ತಾಗುತ್ತದೆ.

ಶ್ರೀ ಸಿ.ಭೈರೇಗೌಡ: ಪತ್ರಿಕೆಗಳಲ್ಲಿ ನಾಳೆ ಬೆಳಿಗ್ಗೆ ದಪ್ಪ ಅಕ್ಷರಗಳಲ್ಲಿ ಬರುತ್ತದೆ. I don't want to read such news about our Government. *ಆದ್ದರಿಂದ ನೀವು ಸ್ಪೆಸಿಫಿಕ್ ಆಗಿ ಉತ್ತರ ಕೊಡಬೇಕಾಗುತ್ತದೆ.*

ಶ್ರೀ ಡಿ.ಬಿ.ಚಂದ್ರೇಗೌಡ: ಮಾನ್ಯ ಅಧ್ಯಕ್ಷರೆ, ತಾವು ಪ್ರಶ್ನೋತ್ತರ ವೇಳೆ ಮುಗಿದಿದೆ ಎಂದು ಹೇಳಿದ್ದೀರಿ.

ಅಧ್ಯಕ್ಷರು: ಮಾನ್ಯ ಭೈರೇಗೌಡ, ಮಾನ್ಯ ಮಂತ್ರಿಗಳು ಸಂಬಂಧಪಟ್ಟ ಮಂತ್ರಿಗಳು ಉತ್ತರವನ್ನು ಹೇಳುತ್ತಾರೆ ಎಂದ ನಂತರವೂ ತಾವು ಪ್ರಶ್ನೆಯನ್ನು ಕೇಳುವುದಕ್ಕೆ ಏನಾದರೂ ಅರ್ಥವಿದೆಯೆ? No, I am very sorry. *ಸದನದಲ್ಲಿ ಸಂಬಂಧಪಟ್ಟ ಮಂತ್ರಿಗಳಿಲ್ಲ, ಮಾನ್ಯ ಮಂತ್ರಿಗಳು ಸಂಬಂಧಪಟ್ಟ ಮಂತ್ರಿಗಳ ಹತ್ತಿರ ಉತ್ತರವನ್ನು ಹೇಳಿಸುತ್ತೇನೆಂದು ಹೇಳಿದ ಮೇಲೆಯೂ ಸಹ ತಾವು ಪುನ: ಏಕೆ ಪ್ರಶ್ನೆಯನ್ನು ಮಾಡುತ್ತೀರಿ?*

ಶ್ರೀ ಸಿ.ಭೈರೇಗೌಡ: ಈಗ ಹೇಳಿರತಕ್ಕಂಥದ್ದು, it is an insinuation. That is why I want to know. That has gone on record. Not only that, the press will carry it tomorrow.

ಅಧ್ಯಕ್ಷರು: ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಸದನಕ್ಕೆ ಬಂದು ಉತ್ತರವನ್ನು ಕೊಡುತ್ತಾರೆ.

ಶ್ರೀ ಸಿ.ಭೈರೇಗೌಡ: ಸಂಬಂಧಪಟ್ಟ ಮಂತ್ರಿಗಳು ಸದನದಲ್ಲಿ ಇರುವಾಗಲೇ ತಾವು ಈ ಪ್ರಶ್ನೆಯನ್ನು ತೆಗೆದುಕೊಳ್ಳಬೇಕಾಗಿತ್ತು.

ಅಧ್ಯಕ್ಷರು: ಮಾನ್ಯ ಸದಸ್ಯರು ಕೇಳಲಿ ನಾನು ಹೇಳುತ್ತೇನೆ.

ಶ್ರೀ ಸಿ.ಭೈರೇಗೌಡ: ನಾನು ಪ್ರಶ್ನೆಯನ್ನು ಕೇಳಿದ್ದಕ್ಕೆ ತಾವು ಸಂಬಂಧಪಟ್ಟ ಮಂತ್ರಿಗಳು ಸದನಕ್ಕೆ ಬಂದ ನಂತರ ಉತ್ತರವನ್ನು ಕೊಡಿಸುತ್ತೇನೆಂದು ಹೇಳುತ್ತೀರಿ. ಮಾನ್ಯ ಸಂಪಂಗಿಯವರು ಪ್ರಶ್ನೆಯನ್ನು ಕೇಳಿದ್ದಕ್ಕೆ, ಮಂತ್ರಿಗಳಿಂದ ಉತ್ತರವನ್ನು ಕೇಳಿ ಎಂದು ತಾವು ಹೇಳುತ್ತೀರಿ, ಹಾಗಾದರೆ ನಾನು ಕೇಳಿದ ಪ್ರಶ್ನೆಗೆ ಉತ್ತರವು ಬರದಿದ್ದರೆ, is it held over for the time being? Is this question held over?

Mr. Speaker: I cannot compel a Minister to reply like this or like that. *ಕಂಪೆಲ್ ಮಾಡುವುದಕ್ಕೆ ಆಗುವುದಿಲ್ಲ. ಮಾನ್ಯ ಪ್ರವಾಸೋದ್ಯಮ ಸಚಿವರು ಸಂಬಂಧಪಟ್ಟ ಮಂತ್ರಿಗಳು ಸದನಕ್ಕೆ ಬಂದನಂತರ ಉತ್ತರವನ್ನು ಕೊಡಿಸುತ್ತೇನೆಂದು ಹೇಳುತ್ತಿದ್ದಾರೆ.* I will take a decision. Leave it to me.

ಶ್ರೀ ಎನ್.ಸಂಪಂಗಿ: ಒಬ್ಬ ನೋಟರಿ ಎಂಬ ಹೆಸರಿನ ವ್ಯಕ್ತಿಯನ್ನು ಅಡ್ವರ್‌ಟೈಸ್‌ಮೆಂಟ್ ಕಂಪನಿಗೆ ಕರೆದುಕೊಂಡು ಬಂದು, ಅವನಿಗೆ ಒಂದು

ಅಡ್ವರ್‌ಟೈಸ್‌ಮೆಂಟ್‌ನ್ನು ಕೊಡಿಸಿ, ಫಂಡ್ಸ್‌ನ್ನು ರೈಸ್ ಮಾಡುವುದಕ್ಕೆ ಒಬ್ಬ ನೋಟರಿಯವರನ್ನು ಕರೆದುಕೊಂಡು ಬಂದರು. ಆ ಕಂಪನಿಯು ಒಂದು ನಯಾಪೈಸೆಯ ಫಂಡನ್ನು ನ್ಯಾಷನಲ್ ಗೇಮ್ಸ್‌ಗೆ ಇವತ್ತು ರೈಜ್ ಮಾಡಲಿಲ್ಲ. ಆದರೆ ಅವರಿಗೆ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇವತ್ತು ಅವರು ಕೊಟ್ಟ ಒಂದು ಕೋಟಿ ರೂಪಾಯಿಗಳಿಗೆ ಯಾವ ಲೆಕ್ಕವಿದೆ, ಇದಕ್ಕೆ ಯಾವ ಅಧಿಕಾರಿಗಳು ಹೊಣೆಯಾಗಿದ್ದಾರೆ, ಇದು ಏಕೆ ನಡೆಯಿತು? ಇದರ ಬಗ್ಗೆ ತನಿಖೆಯನ್ನು ಮಾಡಬೇಕಾಗುತ್ತದೆ.

ಶ್ರೀ ಆರ್.ರೋಷನ್ ಬೇಗ್: ಅವರು ಸ್ಪೆಸಿಫಿಕ್ ಆಗಿ ಲಿಖಿತ ಮೂಲಕವಾಗಿ ಕೊಡಲಿ, ಅದರ ಬಗ್ಗೆ ನಾನು ವಿಚಾರಣೆಯನ್ನು ಮಾಡಿಸುತ್ತೇನೆ.

ಜಿಲ್ಲಾ ಉಸ್ತುವಾರಿ ಮಂತ್ರಿಗಳ ಕಾರ್ಯವ್ಯಾಪ್ತಿ ಹಾಗೂ ಅಧಿಕಾರ ವ್ಯಾಪ್ತಿ

105 (1088) ಶ್ರೀ ಸಿ. ಗುರುಸ್ವಾಮಿ (ಚಾಮರಾಜನಗರ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ;

ಅ) ಜಿಲ್ಲಾ ಉಸ್ತುವಾರಿ ಮಂತ್ರಿಗಳ ಕಾರ್ಯವ್ಯಾಪ್ತಿ ಹಾಗೂ ಅವರ ಅಧಿಕಾರ ವ್ಯಾಪ್ತಿಯ ವಿವರ ನೀಡುವುದು;

ಆ) ಜಿಲ್ಲಾ ಉಸ್ತುವಾರಿ ಮಂತ್ರಿಗಳ ಚಾಮರಾಜನಗರ ಕ್ಷೇತ್ರದ ಶಾಸಕರ ಹಕ್ಕನ್ನು ಕಡೆಗಣಿಸಿರುವುದು ಗಮನಕ್ಕೆ ಬಂದಿದೆಯೆ;

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಸ್.ಎಂ.ಕೃಷ್ಣ ಮುಖ್ಯಮಂತ್ರಿಗಳು

ಅ) ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮ 20 ಅಂಶ ಕಾರ್ಯಕ್ರಮ ಮತ್ತು 15 ಅಂಶ ಕಾರ್ಯಕ್ರಮಗಳನ್ನು ಪರಿಶೀಲಿಸಿ ಅವುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಕಾರ್ಯವನ್ನು ವಹಿಸಲಾಗಿದೆ.

ಆ) ಇಲ್ಲ

ಇ) ಅನ್ವಯಿಸುವುದಿಲ್ಲ.

12.00 ಪಿಎಂ

ಶ್ರೀ ಸಿ.ಗುರುಸ್ವಾಮಿ: ಮಾನ್ಯಅಧ್ಯಕ್ಷರೆ, ಸರ್ಕಾರ ಪ್ರತಿ ಜಿಲ್ಲೆಗೆ ಜಿಲ್ಲಾ ಉಸ್ತುವಾರಿ ಮಂತ್ರಿಗಳನ್ನು ಮಾಡಿರುವ ಬಗ್ಗೆ ಅವರ ಕಾರ್ಯವ್ಯಾಪ್ತಿಯ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೇನೆ. ಅದಕ್ಕೆ ಉತ್ತರವನ್ನು ಇಲ್ಲಿ ಕೊಡಲಾಗಿದೆ. ಅವರ ಕಾರ್ಯವ್ಯಾಪ್ತಿ ಮತ್ತು ಕೆಲಸ ಏನೆಂದರೆ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮ, 20 ಅಂಶಗಳ ಕಾರ್ಯಕ್ರಮ ಮತ್ತು 15 ಅಂಶಗಳ ಕಾರ್ಯಕ್ರಮವನ್ನು ಪರಿಶೀಲಿಸಿ ಅವುಗಳನ್ನು ಪರಿಣಾಕಾರಿಯಾಗಿ ಅನುಷ್ಠಾನಗೊಳಿಸುವ ಕಾರ್ಯವನ್ನು ವಹಿಸಲಾಗಿದೆಯೆನ್ನತಕ್ಕ ಉತ್ತರವನ್ನು ಕೊಟ್ಟಿದ್ದಾರೆ. ಈಗಾಗಲೇ ನನ್ನ ಕ್ಷೇತ್ರದಲ್ಲಿ ಜಿಲ್ಲಾ ಮಂತ್ರಿಗಳು ಬೈಪಾಸ್ ರಸ್ತೆಗೆ ಗುದ್ದಲಿ ಪೂಜೆ ಕಾರ್ಯಕ್ರಮವನ್ನು ಮಾಡುವಾಗ ನನ್ನ ಕ್ಷೇತ್ರದ ಕಾರ್ಯವ್ಯಾಪ್ತಿಯಲ್ಲಿ